# ಮರಕೆ(ಗೆ)ಸ...

ಮೇ ಕೊನೆಯಲ್ಲಿ ನಿಧಾನವಾಗಿ ಮುಂಗಾರು ಅಡಿಯಿಡುತ್ತಿದಂತೆ ಹಳೆಯ ಮರಗಳಲ್ಲಿ ಅವಿತ ಪುಟ್ಟ ಗಡ್ಡೆಗಳು (ದೀರ್ಘ ನಿದ್ದೆ ಮಾಡುವ!) ‘ಎದ್ದೇಳೋಣ, ನಮ್ಮ ಹುಟ್ಟು ಮಾಸ ಬರುತ್ತಿದೆ. ಮೈದಳೆಯಲು ತಯಾರಾಗೋಣ’ ಎಂದು ನಿಧಾನಕ್ಕೆ ಚಿಗುರಲು ಶುರುವಿಟ್ಟುಕೊಳ್ಳುತ್ತವೆ! ಜೂನ್‌ನಿಂದ ಆಗಸ್ಟ್‌ವರೆಗೆ ಮಲೆನಾಡ ಹಳೆಯ ಮರಗಳಲ್ಲಿ ಸಿಂಗಾರಕ್ಕೆ ಇಟ್ಟಂತೆ ಚೆಂದದಿ ಒಂಟಿ ಕಾಲಲ್ಲಿ (ದಂಟು) ನಿಲ್ಲುತ್ತವೆ. ಈ ಮರಕೆ(ಗೆ)ಸವನ್ನು ಮುಖ್ಯವಾಗಿ ಕೊಂಕಣಿಗರು ಬಳಸುತ್ತಾರೆ. ಇದರಿಂದ ತಯಾರಿಸುವ ಖಾದ್ಯ ‘ಪತ್ರೊಡೆ’ ತುಂಬಾ ರುಚಿಕರ; ಹಲವರು ಇಷ್ಟಪಡುವರು, ಬಳಸುವರು. ಹಳ್ಳಿಗಳಲ್ಲಿ ಎಷ್ಟೋ ಮಂದಿ ಮರಗೆಸ ಎಲೆಯನ್ನು ಕಿತ್ತು ಬೆಂಗಳೂರು, ಮಂಗಳೂರು, ಉಡುಪಿ, ಕುಂದಾಪುರ ಎಂದು ದೂರದೂರಿಗೆ ಬಸ್‌ಗಳಲ್ಲಿ ಪಾರ್ಸೆಲ್ ಕಳಿಸುವರು. ಅಲ್ಲಿನ ಅಂಗಡಿಗಳಲ್ಲಿ ಮಾರಾಟಕ್ಕೆ! 10–20 ಎಲೆ ಕಟ್ಟಿ ಪ್ಯಾಕ್ ಮಾಡಿ ₹50–100ಗೆ ಮಾರಾಟ ಮಾಡುವರು! ಇತ್ತೀಚಿನ ವರ್ಷಗಳಲ್ಲಿ ಇದೊಂದು ಉದ್ಯೋಗ, ವ್ಯವಹಾರ ಆಗಿದೆ. ಆಗಸ್ಟ್ ನಂತರ ಕೆಸ ಬಲಿತು ಖಾದ್ಯ ತಯಾರಿಸಿ ತಿಂದಾಗ ಗಂಟಲಲ್ಲಿ ತುರಿಕೆ! ಇನ್ನೂ ಕೆಲವು ನೆಲದಲ್ಲೂ ಬಿಡುವುದಿದೆ, ಆದರೆ ಅದಕ್ಕೆ ಮರದಲ್ಲಿ ಬಿಟ್ಟ ಎಲೆಯ ರುಚಿ ಇರುವುದಿಲ್ಲ. ಈ ಋತುವಿನಲ್ಲಿ ಒಮ್ಮೆ ಮರಕೆ(ಗೆ)ಸದ ‘ಪತ್ರೊಡೆ’ ಸವಿದು ನೋಡಿ!

**–ನಗರ ಗುರುದೇವ್ ಭಂಡಾರ್ಕರ್, ಹೊಸನಗರ**



# ಕಾಳಿ ಗಂಡಕಿ ನದಿಯ ಕಲ್ಲುಗಳು

ಚಿತ್ರದಲ್ಲಿ ಕಾಣುತ್ತಿರುವುದು ನೇಪಾಳದಲ್ಲಿನ ಗಂಡಕಿ ಉಪನದಿಯಾದ ಕಾಳಿ ಗಂಡಕಿಯ ನದಿಯ ತಳದಿಂದ ಅಥವಾ ದಡದಿಂದ ಸಂಗ್ರಹಿಸಿದ ಒಂದು ನಿರ್ದಿಷ್ಟ ವಿಧದ ಕಲ್ಲು. ಯಾವುದೇ ಮಾನವ ಹಸ್ತಕ್ಷೇಪವಿಲ್ಲದೆ ನೈಸರ್ಗಿಕವಾಗಿ ಹಲವು ಚಿಹ್ನೆಗಳನ್ನು ಹೊಂದಿರುವುದರಿಂದ ಈ ಕಲ್ಲುಗಳನ್ನು ಪವಿತ್ರವೆಂದು ಪರಿಗಣಿಸಲಾಗುತ್ತದೆ. ಇವು ಸಾಮಾನ್ಯವಾಗಿ 66 ದಶಲಕ್ಷ ವರ್ಷಗಳ ಹಿಂದಿನ ಡೆಮೊಸಿಯನ್‌ಕ್ರಿಟೇಶಿಯಸ್ ಅವಧಿಯ ಅಮ್ಮೊನೈಟ್ ಚಿಪ್ಪುಗಳ ಪಳೆಯುಳಿಕೆಗಳಾಗಿವೆ.



ಈ ಕಲ್ಲುಗಳು ಸಾಲಿಗ್ರಾಮದ ಹೊರಭಾಗದಲ್ಲಿ, ವಕ್ರಾಕೃತಿ ಸೇರಿದಂತೆ ವಿವಿಧ ರೀತಿಯಲ್ಲಿ ಕಂಡುಬರುವ ಪಟ್ಟೆಗಳ ಆಧಾರದ ಮೇಲೆ ಶಂಖ, ಚಕ್ರಗಳಂತೆ ಕಾಣುತ್ತವೆ. ಶಂಖವು ಶಿವನನ್ನು ಪ್ರತಿನಿಧಿಸಿದ್ದು, ಅದನ್ನು ಶಿವ ಸಾಲಿಗ್ರಾಮವೆಂದೂ ಚಕ್ರದಂತೆ ಕಾಣುವ ಕಲ್ಲನ್ನು ವಿಷ್ಣುಸಾಲಿಗ್ರಾಮವೆಂದೂ ಕರೆಯಲಾಗುತ್ತದೆ. ವಾರಾಣಸಿಯ ರಸ್ತೆಬದಿಗಳಲ್ಲಿ ಮಾರಾಟಕ್ಕಿರಿಸಿದ್ದ ಸಾಲಿಗ್ರಾಮವು ಕಂಡುಬಂದಿದ್ದು ಹೀಗೆ.

**–ಎಸ್. ಪ್ರಭಾವತಿ, ಬೆಂಗಳೂರು**



# ಬಂಗಾಡಿ ಬಂಗರಸನ ‘ನೆಲೆ’

ಬೈಲಂಗಡಿಯ ರಾಣಿ ಸೋಮಲಾದೇವಿ ಮತ್ತು ಬಂಗಾಡಿಯ ಬಂಗರಸನ ಸಮಾಧಿ ಸ್ಥಳವಿದು. ಕ್ರಿ.ಶ. 1611ರಲ್ಲಿ ದಕ್ಷಿಣ ಕನ್ನಡದ ಬೈಲಂಗಡಿಯನ್ನು ಆಳಿದ ಖ್ಯಾತ ರಾಣಿ ಸೋಮಲಾದೇವಿ ಮತ್ತು ಆಕೆಯ ಪತಿ ಬಂಗಾಡಿಯ ರಾಜ ಲಕ್ಷ್ಮಪ್ಪ ಬಂಗರಸನ ಗೋರಿ ಬೆಳ್ತಂಗಡಿ ತಾಲ್ಲೂಕಿನ ತೋಟತ್ತಾಡಿ ಗ್ರಾಮದ ಬೈಲಂಗಡಿಯಲ್ಲಿದೆ.

**–ರಾಜೇಂದ್ರ ಕುಮಾರ್ ಜೈನ್, ಉಜಿರೆ**

